ನಬಾರ್ಡ್ ಯೋಜನೆಯಡಿ ಮಂಜೂರಾದ ಕ್ಷೇತ್ರವಾರು ಕಾಮಗಾರಿ

619 (391) ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಬಾರ್ಡ್ ಯೋಜನೆಯಡಿ ಮಂಜೂರಾದ ಕ್ಷೇತ್ರವಾರು ಕಾಮಗಾರಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಈ ಬಗ್ಗೆ ಹಣ ಮತ್ತು ಕಾಮಗಾರಿ ಹಂಚಿಕೆಯಲ್ಲಿ ಏರುಪೇರಾಗಲು ಕಾರಣವೇನು ?

ಇ) ಈ ಯೋಜನೆಯಲ್ಲಿ ಈವರೆಗೆ ಮಂಜೂರಾಗಿರುವ ಹಣವೆಷ್ಟು ಹಾಗೂ ಖರ್ಚಾಗಿರುವ ಹಣವೆಷ್ಟು ?

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು)

ಅ) ನಬಾರ್ಡ್ ಯೋಜನೆಯಡಿ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಈವರೆಗೆ 681 ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಮಂಜೂರಾಗಿದ್ದು ಇವು ಕ್ಷೇತ್ರವಾರು ಮಂಜೂರಾಗಿರುವುದಿಲ್ಲ.

ಆ) ರಾಜ್ಯ ಸರ್ಕಾರವು ಆದ್ಯತೆ ಮತ್ತು ಅವಶ್ಯಕತೆಗಳಿಗನುಗುಣವಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗ್ರಾಮೀಣ ಹಿನ್ನೆಲೆಯುಳ್ಳ ಕಾಮಗಾರಿಗಳನ್ನು ಗುರುತಿಸಿ ನಬಾರ್ಡ್‌ಗೆ ಪ್ರಸ್ತಾವನೆ ಸಲ್ಲಿಸುತ್ತಿದ್ದು ಸದರಿ ಸಂಸ್ಥೆಯು ತನ್ನ ನಿಯಮಾವಳಿಗೆ ಸರಿ ಹೊಂದುವಂತಹ ಕಾಮಗಾರಿಗಳಿಗೆ ಅನುಮೋದನೆ ನೀಡುತ್ತದೆಯಾದ್ದರಿಂದ, ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈವರೆಗೆ 313 ಕೋಟಿ ರೂ.ಗಳ ಮೊತ್ತದ ಕಾಮಗಾರಿಗಳು ಮಂಜೂರಾಗಿದ್ದು 107.0 ಕೋಟಿ ರೂ.ಗಳು ವೆಚ್ಚವಾಗಿರುತ್ತದೆ.

ಲೋಕೋಪಯೋಗಿ ಇಲಾಖೆಗಳ ರಸ್ತೆ ನಿರ್ಮಾಣ

620 (392) ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97, 97-98 ಹಾಗೂ 98-99ರ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಕಾದಿರಿಸಿದ ಹಣವೆಷ್ಟು ? ಬಿಡುಗಡೆ ಮಾಡಿದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು? (ವರ್ಷವಾರು ಯೋಜನೆ ಹಾಗೂ ಯೋಜನೇತರ ವಿವರ ನೀಡುವುದು.

ಆ) 1996-97, 97-98 ಹಾಗೂ 98-99ನೇ ಸಾಲಿನಲ್ಲಿ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಎಷ್ಟು ಕಿಮೀ ರಸ್ತೆ ಅಭಿವೃದ್ಧಿ ಮಾಡಲು ಯೋಜಿಸಲಾಗಿತ್ತು (ಜಿಲ್ಲಾವಾರು ವಿವರ ನೀಡುವುದು).

ಇ) ಈ ಮೇಲಿನ ವರ್ಷಗಳಲ್ಲಿ ಎಷ್ಟು ಕಿಮೀ ರಸ್ತೆಗಳನ್ನು ನಿರ್ಮಿಸಿದೆ ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಉಮೇಶ್.ವಿ. ಕತ್ತಿ (ಲೋಕೋಪಯೋಗಿ ಸಚಿವರು) :

ಅ) 1996-97, 97-98 ಹಾಗೂ 98-99ರ ಆಯವ್ಯಯ ದಲ್ಲಿ ಲೋಕೋಪಯೋಗಿ ಇಲಾಖೆಗೆ ನೀಡಿರುವ ಅನುದಾನ ಬಿಡುಗಡೆ ಮತ್ತು ವೆಚ್ಚ ಅನುಬಂಧ-1ರಲ್ಲಿ ನೀಡಿದೆ.

ಆ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ 1996-97, 97-98 ಹಾಗೂ 98-99ನೇ ಸಾಲಿನಲ್ಲಿ ರಾಜ್ಯ ಯೋಜನೆಗಳಲ್ಲಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದ್ದ ಗುರಿ ವಿವರಗಳು ಈ ಕೆಳಕಂಡತಿದೆ (ಜಿಲ್ಲಾವಾರು ವಿವರ ಅನುಬಂಧ-2ರಲ್ಲಿ ನೀಡಲಾಗಿದೆ)

1996-97 1791 ಕಿಮೀ

1997-98 1227 ಕಿಮೀ

1998-99 365 ಕಿಮೀ

ಇ) ಲೋಕೋಪಯೋಗಿ ಇಲಾಖೆಗೆ ಸಂಬಂಧಸಿದಂತೆ 1996-97, 97-98, 98-99ನೇ ಸಾಲಿನಲ್ಲಿ ರಾಜ್ಯ ಯೋಜನೆಗಳಲ್ಲಿ ನಿರ್ಮಿಸಲಾಗಿರುವ (ಸಾಧನೆಯ ವಿವರಗಳು ಈ ರೀತಿ ಇವೆ. (ಜಿಲ್ಲಾವಾರು ವಿವರ ಅನುಬಂಧ-2 ರಲ್ಲಿ ನೀಡಿದೆ).

1996-97 2210 ಕಿಮೀ

1997-98 1027

1998-99 226

(ಜನವರಿ ಅಂತ್ಯಕ್ಕೆ)